## ಪದಬಂಧ




ಎಡದಿಂದ ಬಲಕ್ಕೆ:

1. ಆತನಿಂದ ದಾನ ಪಡೆದಿದ್ದೆಲ್ಲ ಅಲ್ಲೇ ಅದೃಶ್ಯವಾಯಿತಲ್ಲ! (4)
3. ಸಂತೃಪ್ತಿ ಇಲ್ಲದವರೇ ಬಹುಪಾಲು ಈಗಿನ ಪೀಳಿಗೆ (3)
4. ಮುಂದುವರಿಯುವ ಈ ಪರಿ ಎಲ್ಲರಿಗೂ ಆದರ್ಶ (3)
6. ಜೇನು ಬೆರೆತ ತಿಂಗಳೆಂದರೆ ವಸಂತವೇ ತಾನೇ? (4)
7. ಸಪ್ಪೆಯಾಯಿತು ಸ್ವಲ್ಪ, ಭೋಜನಾಂತ್ಯದ ಸಿಹಿ ಪೇಯ (3)
9. ಹೆದ್ದಾರಿ ನಿರ್ಮಾಣದ ವಿಷಯವೇ ಭಾರೀ ದೊಡ್ಡದು (3)
11. ಕೊನೆಗೊಂಡಿದ್ದನ್ನೆಲ್ಲ ಮತ್ತೆ ಕೆದಕಿ ಇದೆಂಥ ಹೋರಾಟ !(3)
13. ಪ್ರಸಿದ್ಧ ತಪೋವನದ ಪ್ರಸ್ತುತ ಸ್ಥಿತಿ ಕಂಡು ದುಃಖ, ಪರಿತಾಪ (3)
15. ಮುಂಜಾನೆಯ ತನಕ ಸಂಗ್ರಹಿಸಿದ್ದು ಪ್ರಜೆಗಳ ಅಭಿಪ್ರಾಯ (4)
17. ನೃತ್ಯವನ್ನು ಕಲಿಯುವ ಒಂದು ಪ್ರಯತ್ನ, ಅಷ್ಟೆ (3)
18. ರಾದ್ಧಾಂತವಾಯಿತೆಂಬುದು ಕೇವಲ ಒಂದು ಗಾಳಿ ಸುದ್ದಿ (3)
19. ಮುಖ ಕಂಡೊಡನೆಯೇ ತಿಳಿಯಿತು, ಆತನದು ಬರೀ ಭ್ರಮೆ (4)

ಮೇಲಿಂದ ಕೆಳಕ್ಕೆ :

1. ಆತ್ಮೀಯ ಮಾತುಕತೆಗೆ ಈ ಸಂದರ್ಭವೇ ಕೊನೆಯದು (3)
2. ಹೆಚ್ಚು ಕಡಿಮೆ ಇಲ್ಲದ್ದು ಹೌದು, ಆದರೆ ತಲೆ ಕೆಳಗು (3)
3. ಸುದ್ದಿಯನ್ನು ಕೇಳಿದ್ದೇ ತಡ, ಕಂದಾಯ ಸಲ್ಲಿಸಿದ್ದಾಯಿತು (3)
5. ಪರಾರಿಯಾಗಿದ್ದವನನ್ನು ಎಳೆದು ತಂದು ದುರಸ್ತಿ ಮಾಡಿಸಿದರೇ ? (3)
7. ಪುತ್ರನನ್ನೇ ಕಷ್ಟಕ್ಕೆ ತಳ್ಳುವುದು ಮಹಾ ಪಾಪದ ಕೆಲಸವಾದೀತು (3)
8. ಸಾಧ್ಯವಾದದ್ದನ್ನೆಲ್ಲ ಬಳಸಿ ನಿರ್ಮಿಸಲಾದದ್ದು ಈ ಮನೆ (3)
9. ಅಲ್ಲಿ ಹಾಡುತ್ತಿರುವವನಿಗೆ ಧ್ವನಿಯ ಮೇಲೆ ಒಳ್ಳೇ ನಿಯಂತ್ರಣ ಇದೆ (3)
10. ಮುಂದೆ ನಿಂತವನ ಮುಖದಲ್ಲಿ ಏನೋ ದುಃಖ (3)
12. ದೇಹ ದಾರ್ಢ್ಯ ನೋಡಿದಿರಾ ? ಅಬ್ಬ, ಎಂಥ ಬೃಹದ್ದೇಹಿ ! (3)
14. ಪಂದ್ಯವನ್ನು ಅಂತ್ಯಗೊಳಿಸುವಾಗ ಹೀಗೊಂದು ಸಂಪ್ರದಾಯ (3)
15. ಕಜ್ಜಾಯವನ್ನು ಹಂಚುತ್ತಿರುವವನೇ ಆಕೆಯ ತಂದೆ (3)
16. ವಿತರಿಸುವ ಕೆಲಸ ಪಡೆಯಲು ಏಕೆ ಇಂತಹ ಆತುರ ? (3)

### 26-04-2018ರ ಉತ್ತರಗಳು

ಎಡದಿಂದ ಬಲಕ್ಕೆ: 1.ಪ್ರಸಾಧನ (= ಅಲಂಕಾರ) 3. ವಿರಸ 4.ವ್ಯಸನ 6. ಪಾರಂಗತ 8. ತರಗತಿ 10. ರಕ್ತಾಂಬರ 12. ದಿವಸ್ಪತಿ 16. ದುಡುಕು 17. ಜವ್ವನೆ 18. ಶತಾವರಿ

ಮೇಲಿಂದ ಕೆಳಕ್ಕೆ : 1. ಪ್ರಸರ ( = ಪ್ರಸಾರ ) 2. ನವ್ಯತೆ 3. ವಿರಾಗ 5. ನಶ್ವರ 6. ಪಾರಾವಾರ 7. ತಳವಾರ 8. ತಳಹದಿ 9. ತಿರುಪತಿ 11. ಬರಿದು 13. ವರ್ತನೆ 14. ಅಂಕುಶ 15. ಮಂಜರಿ (=ಗೊಂಚಲು )

## ಪ್ರಶ್ನಾಂಕಣ

# ಆರ್ಕ್ಟಿಕ್- ಅಂಟಾರ್ಕ್ಟಿಕಾ: ಅಂತರವೇನು?

'ಆರ್ಕ್ಟಿಕ್ ಮತ್ತು ಅಂಟಾರ್ಕ್ಟಿಕಾ' ಇವು ಪೃಥ್ವಿಯ ಎರಡು ಅತಿ ವಿಶಿಷ್ಟ ಪ್ರದೇಶಗಳು. ಸದಾ ಶೀತ ಹಿಡಿದ, ಆರು ತಿಂಗಳು ನಿರಂತರ ಹಗಲಿನ, ಮತ್ತೆ ಆರು ತಿಂಗಳು ನಿರಂತರ ಇರುಳಿನ ವಿಚಿತ್ರ ಪ್ರದೇಶಗಳು ಇವು. ಧರೆಯ ವಾಯುಮಂಡಲದ ಗಾಳಿ ಪರಿಚಲನೆಯಲ್ಲಿ, ಸಾಗರ ಪ್ರವಾಹಗಳ ಸಂವಹನದಲ್ಲಿ ಅತ್ಯಂತ ಮಹತ್ವದ, ನಿರ್ಣಾಯಕ ಪಾತ್ರ ಹೊಂದಿರುವ ಇವೆರಡೂ ಪ್ರದೇಶಗಳ ನಡುವಣ ಅಂತರಗಳು ಹಲವಾರು. ಪ್ರಮುಖವಾಗಿ:

★ ಆರ್ಕ್ಟಿಕ್ ನಮ್ಮ ಧರೆಯ 'ಶಿರ' ವಾದರೆ ಅಂಟಾರ್ಕ್ಟಿಕಾ ಧರೆಯ 'ತಳ'ದಂತಿದೆ (ಕ್ರಮವಾಗಿ ಚಿತ್ರ 1 ಮತ್ತು ಚಿತ್ರ 3). ಭೂಮಿಯ 'ಉತ್ತರ ಧ್ರುವ' ಆರ್ಕ್ಟಿಕ್‌ನಲ್ಲಿದೆ; ತದ್ವಿರುದ್ಧವಾದ 'ದಕ್ಷಿಣ ಧ್ರುವ' ಅಂಟಾರ್ಕ್ಟಿಕಾದಲ್ಲಿದೆ.

★ ಅಂಟಾರ್ಕ್ಟಿಕಾ ಒಂದು ಭೂ ಖಂಡ. ದಕ್ಷಿಣ ಸಾಗರದಿಂದ ಪರಿವರಿಸಲ್ಪಟ್ಟಿರುವ ಈ ಭೂ ಖಂಡ ಸಮೀಪ ಹದಿನಾಲ್ಕು ದಶಲಕ್ಷ ಚದರ ಕಿಲೋ ಮೀಟರ್ ವೈಶಾಲ್ಯ ಹೊಂದಿದ್ದು ಶಾಶ್ವತ ಹಿಮಾವೃತವಾಗಿದೆ. ಆದರೆ, ಆರ್ಕ್ಟಿಕ್ ಭಾಗಶಃ ಸಾಗರ ಮತ್ತು ಭಾಗಶಃ ನೆಲಭಾಗಗಳನ್ನೊಳಗೊಂಡ




ಪ್ರದೇಶ. ಸುಮಾರು ಅಂಟಾರ್ಕ್ಟಿಕಾದಷ್ಟೇ ವಿಸ್ತಾರ ಇರುವ ಆರ್ಕ್ಟಿಕ್‌ನ ಕಡಲ ಭಾಗ ತೇಲುಹಿಮದಿಂದ ಆವರಿಸಲ್ಪಟ್ಟಿದೆ (ಚಿತ್ರ–1ರಲ್ಲಿ ಗಮನಿಸಿ) ಹಲವಾರು ರಾಷ್ಟ್ರಗಳ– ಯುಎಸ್‌ಎ ( ಅಲಾಸ್ಕ), ಕೆನಡ, ಗ್ರೀನ್ ಲ್ಯಾಂಡ್, ಫಿನ್ ಲ್ಯಾಂಡ್, ಐಸ್ ಲ್ಯಾಂಡ್, ನಾರ್ವೇ, ರಷ್ಯಾ ಮತ್ತು ಸ್ವೀಡನ್– ಭಾಗಶಃ ನೆಲ ಪ್ರದೇಶಗಳು ಆರ್ಕ್ಟಿಕ್‌ಗೆ ಸೇರಿವೆ. ಆದರೆ, ಅಂಟಾರ್ಕ್ಟಿಕಾ ಯಾವ ರಾಷ್ಟ್ರಕ್ಕೂ ಸೇರಿಲ್ಲ. ಉಳಿದೆಲ್ಲ ಭೂ ಖಂಡಗಳಿಂದಲೂ ದೂರ ಸರಿದು ನಿಂತಿರುವ ಅಂಟಾರ್ಕ್ಟಿಕಾದ ಕಿಂಚಿತ್ ಭಾಗವೂ ಯಾವುದೇ ದೇಶದ ಆಸ್ತಿಯೂ ಆಗಿಲ್ಲ.

★ ಆರ್ಕ್ಟಿಕ್ ಅದರದೇ ವಿಶಿಷ್ಟ, ವಿವಿಧ, ಸಮೃದ್ಧ ಜೀವಿಗಳಿಗೆ ಆಶ್ರಯವಾಗಿದೆ. ಹಿಮಗರಡಿ (ಚಿತ್ರ– 2), ಕ್ಯಾರಿಬೂ, ವಾಲ್ರಸ್, ನಾರ್ವಾಲ್ ಇತ್ಯಾದಿ ಬಹುವಿಧ ಪ್ರಾಣಿಗಳೇ ಅಲ್ಲದೆ ಸಮೀಪ 1700 ಪ್ರಭೇದಗಳ ಸಸ್ಯಗಳು ಅಲ್ಲಿ ನೆಲೆ ಹಿಡಿದಿವೆ. ಜೊತೆಗೆ ಆರ್ಕ್ಟಿಕ್ ನಲ್ಲಿ ಸುಮಾರು ನಲವತ್ತು ಲಕ್ಷ ಮನುಷ್ಯರೂ ನೆಲೆಸಿದ್ದಾರೆ. ಅಂಟಾರ್ಕ್ಟಿಕಾದಲ್ಲಿ ಪೆಂಗ್ವಿನ್ ಗಳು ಲಕ್ಷಾಂತರ ಸಂಖ್ಯೆಯಲ್ಲಿ ಗುಂಪಾಗಿ ಪ್ರತಿ ವರ್ಷ 'ಸಂತಾನ ಜಾತ್ರೆ' ನಡೆಸಿ ಕಡಲಿಗೇ ಮರಳುತ್ತವಾದರೂ (ಚಿತ್ರ– 4 ) ಅಲ್ಲಿನ ಹಿಮಾವೃತ ನೆಲಾವಾರದಲ್ಲಿ ಪ್ರಾಣಿಗಳ ಮತ್ತು ಸಸ್ಯಗಳ ಶಾಶ್ವತ ನೆಲೆಗಳು ವಿರಳಾತಿವಿರಳ. ಕೆಲವಾರು ರಾಷ್ಟ್ರಗಳ ವೈಜ್ಞಾನಿಕ ಕೇಂದ್ರಗಳಿಗೆ ತಾತ್ಕಾಲಿಕವಾಗಿ ಬಂದು ಹೋಗುವ ಒಟ್ಟು ಸುಮಾರು ಒಂದು ಸಾವಿರ ವಿಜ್ಞಾನಿ–ಸಂಶೋಧಕರಷ್ಟೇ ಅಲ್ಲಿನ ಜನಸಂಖ್ಯೆ.

★ ಆರ್ಕ್ಟಿಕ್ ಪ್ರದೇಶದಲ್ಲಿ ಹಲವು ಖನಿಜ ನಿಕ್ಷೇಪಗಳಿವೆ; ಅಪಾರ ಪ್ರಮಾಣದ ತೈಲ ಮತ್ತು ನೈಸರ್ಗಿಕ ಅನಿಲ ನಿಕ್ಷೇಪಗಳೂ ಪತ್ತೆಯಾಗಿವೆ. ಅಂಟಾರ್ಕ್ಟಿಕಾದ ನೆಲದಲ್ಲೂ ಹೇರಳ ಖನಿಜಗಳು ಮತ್ತಿತರ ನಿಕ್ಷೇಪಗಳು ಇರಬಹುದಾದರೂ ಅವನ್ನು ಪತ್ತೆ ಮಾಡುವ ಪ್ರಯತ್ನಗಳು ನಡೆದಿಲ್ಲ; ಯಾವ ರಾಷ್ಟ್ರವೂ ಅಂತಹ ಯತ್ನಗಳನ್ನು ನಡೆಸುವಂತೆಯೂ ಇಲ್ಲ.

■ ಎನ್. ವಾಸುದೇವ್